ಸಚಿವರುಗಳು ಹೆಲಿಕಾಪ್ಟರಿನ ಬಳಿಕೆ

೧೯೪. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜನವರಿ ೧೯೬೫ ರಿಂದ ೩೦ ಏಪ್ರಿಲ್ ೧೯೬೮ರವರೆಗೆ ರಾಜ್ಯ ಮಂತ್ರಿಮಂಡಲದ ಸದಸ್ಯರು (ಮುಖ್ಯಮಂತ್ರಿಯೂ ಸಹಿತ) ಎಷ್ಟು ಭಾರಿ ರಾಜ್ಯ ಸ್ವಾಮ್ಯದ ಹೆಲಿಕಾಪ್ಟರನ್ನು ಪ್ರವಾಸಕ್ಕೆ ಉಪಯೋಗಿಸಿದ್ದಾರೆ.

ಆ) ಇದಕ್ಕಾಗಿ ವೆಚ್ಚ ಮಾಡಿದ ಹಣವೆಷ್ಟು.

ಇ) ಖಾಸಗಿಯವರಿಂದ ಅಥವಾ ಬೇರೆ ಇಲಾಖೆಗಳಿಂದ ಹೆಲಿಕಾಪ್ಟರ್ ಅಥವಾ ವಿಮಾನವನ್ನು ಮಂಜೂರು ಮಂತ್ರಿಗಳು ಅಥವಾ ಮಂತ್ರಿಗಳು ಪ್ರವಾಸಕ್ಕಾಗಿ ಬಾಡಿಗೆ ಪಡೆದಿದ್ದಾರೆ.

ಈ) ಇದಕ್ಕಾಗಿ ನೀಡಿದ ಬಾಡಿಗೆ ಹಣದ ಮೊತ್ತವೆಷ್ಟು ?

ಶ್ರೀ ರಾಮಕೃಷ್ಣ ಹೆಗ್ಗಡೆ (ಮುಖ್ಯಮಂತ್ರಿಗಳು).—

ಅ) ೩೪ ಬಾರಿ ಉಪಯೋಗಿಸಿದ್ದಾರೆ.

ಆ) ರೂ. ೩೦,೦೬,೯೨೪–೦೦.

ಇ) ಹೌದು.

ಈ) ರೂ. ೫,೬೮,೬೯೫–೧೭.

ರಾಜ್ಯದಲ್ಲಿ ನಡೆದ ಕೊಲೆಗಳ ಸಂಖ್ಯೆ

೨೪೨. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;

ಪ್ರಶ್ನೆ		ಉತ್ತರ		
ಅ)	ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ನಡೆದ ಕೊಲೆಗಳ ಸಂಖ್ಯೆ ಎಷ್ಟು ?	೧೯೬೫	೧೯೬೬	೧೯೬೭
	(ಜಿಲ್ಲಾವಾರು, ವರ್ಷವಾರು. ಪ್ರತ್ಯೇಕ ವಿವರ ನೀಡುವುದು)	೧೦೦೨ (ಜಿಲ್ಲಾವಾರು ಮಾಹಿತಿಯನ್ನು ಅನುಬಂದದಲ್ಲಿ ನೀಡಲಾಗಿದೆ).	೧೦೭೧	೧೧೦೫
ಆ)	ಈ ಪ್ರಕರಣಗಳಲ್ಲಿ ಅಪರಾಧಗಳು ಪತ್ತೆಯಾಗಿರುವ ಮೊಕದ್ದಮೆಗಳೆಷ್ಟು ?	೧೯೬೫	೧೯೬೬	೧೯೬೭
		೭೮೨	೭೫೪	೭೬೩
ಇ)	ಆ ಪೈಕಿ ಅಸ್ವಾಭಾವಿಕ ಸಾವೆಂದು ತೀರ್ಮಾನಿಸಲಾದ ಮೊಕದ್ದಮೆಗಳೆಷ್ಟು ?	೧೯೬೫	೧೯೬೬	೧೯೬೭
		೩೦	೩೯	೩೬